ರಾಜ್ಯಕ್ಕೆ ದೂರ ಸಂಪರ್ಕ ಇಲಾಖೆ ವತಿಯಿಂದ ಓ.ಎಫ್.ಸಿ ಅಳವಡಿಸುವುದು

998 (1303) ಶ್ರೀ ನಾರಾಯಣಸ್ವಾಮಿ ಎ. (ಆನೇಕಲ್): ಮಾನ್ಯ ಬೃಹತ್ ಹಾಗೂ ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯಕ್ಕೆ ದೂರಸಂಪರ್ಕ ಇಲಾಖೆ ವತಿಯಿಂದ ಓ.ಎಫ್.ಸಿ. ಕೇಬಲ್ ಅಳವಡಿಸಲು ಬಿಡುಗಡೆಯಾದ ಒಟ್ಟು ಹಣವೆಷ್ಟು; (2001-02, 2002-03ರ ಸಾಲಿನಲ್ಲಿ ಜಿಲ್ಲಾವಾರು ವಿವರ ಒದಗಿಸಿ);

ಆ) ನಗರ ಜಿಲ್ಲೆಗೆ (ಬೆಂಗಳೂರು) ಬಿಡುಗಡೆ ಯಾದ ಹಣವೆಷ್ಟು; (ಪೂರ್ಣ ವಿವರ ನೀಡಿ);

ಇ) ಸದರಿ ಹಣದಿಂದ ಕೈಗೊಂಡಿರುವ ಕಾಮಗಾರಿಗಳ ವಿವರ ಹಾಗೂ ಓ.ಎಫ್.ಸಿ. ದೂರಸಂಪರ್ಕ ಇಲಾಖೆ ಜಿಲ್ಲಾ ಪಂಚಾಯ್ತಿ ಲೆಕ್ಕಕ್ಕೆ ನೀಡದೆ ಇ.ಇ. ಅವರ ಖಾತೆಗೆ ನೀಡಿರುವುದು ಸರಿಯೇ? (ಮಾಹಿತಿ ನೀಡುವುದು)?

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಹಾಗೂ ಮಧ್ಯಮ ಕೈಗಾರಿಕಾ ಸಚಿವರು) :

ಅ) ಓ.ಎಫ್.ಸಿ ಕೇಬಲ್ ಅಳವಡಿಸುವುದಕ್ಕೆ ದೂರ ಸಂಪರ್ಕ ಇಲಾಖೆಯು ರಾಜ್ಯಗಳಿಗೆ ಯಾವುದೇ ಹಣವನ್ನು ನೀಡುವುದಿಲ್ಲ. ದೂರಸಂಪರ್ಕ ಕ್ಷೇತ್ರದಲ್ಲಿ ಭಾರತ ಸರಕಾರದ ಉದಾರ ನೀತಿಯಿ ಅಡಿ ದೂರಸಂಪರ್ಕ ಅಂತರಜಾಲ ಅಥವಾ ಸಂಬಂಧಿಸಿದ ಇತರ ಸೌಕರ್ಯವನ್ನು ಒದಗಿಸುವ ಬಗ್ಗೆ ದೂರ ಸಂಪರ್ಕ ಇಲಾಖೆಯ ಲೈಸನ್ಸ್ ಪಡೆದ ಯಾವುದೇ ಏಜನ್ಸಿಯು ರಾಜ್ಯ ಸರಕಾರದ ಮಾಹಿತಿ ತಂತ್ರಜ್ಞಾನ ಇಲಾಖೆಯೊಂದಿಗೆ ಒಪ್ಪಂದ ಮಾಡಿಕೊಂಡು ಓ.ಎಫ್.ಸಿ. ಕೇಬಲ್‌ಗಳನ್ನು ಅಳವಡಿಸುತ್ತಾರೆ.

ಆ) ಮತ್ತು ಇ) ಮೇಲಿನ ಉತ್ತರದಿಂದ ಈ ಪ್ರಶ್ನೆಗಳಿಗೆ ಉತ್ತರ ಉದ್ಭವಿಸುವುದಿಲ್ಲ

ವೈದ್ಯಕೀಯ ಕಾಲೇಜುಗಳಲ್ಲಿ ಮೆರಿಟ್ ಆಧಾರದ ಮೇಲೆ ಪ್ರವೇಶ ಪಡೆದ ವಿದ್ಯಾರ್ಥಿಗಳು

999 (310) ಶ್ರೀ ಡಿ.ಆರ್. ಪಾಟೀಲ್ (ಗದಗ್): ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ 3 ವರ್ಷಗಳಲ್ಲಿ ವೈದ್ಯಕೀಯ ಕಾಲೇಜುಗಳಲ್ಲಿ ಮೆರಿಟ್ ಆಧಾರದ ಮೇಲೆ ಪ್ರವೇಶ ಪಡೆದ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು - ವರ್ಷಾವಾರು ಮಾಹಿತಿ ನೀಡುವುದು)

ಆ) ವೈದ್ಯಕೀಯ ಶಿಕ್ಷಣಕ್ಕೆ ಪ್ರವೇಶ ಪಡೆಯುವಲ್ಲಿ ಪ್ರಾದೇಶಿಕ ತಾರತಮ್ಯ ಕಂಡು ಬರುವುದೇ?

ಇ) ಈ ಪ್ರಾದೇಶಿಕ ತಾರತಮ್ಯ ಹೋಗಲಾಡಿಸಲು ಸರ್ಕಾರ ಯಾವ ಕ್ರಮವನ್ನು ಕೈಗೊಳ್ಳುವುದು

ಡಾ।। ಎ.ಬಿ. ಮಾಲಕರೆಡ್ಡಿ (ವೈದ್ಯಕೀಯ ಶಿಕ್ಷಣ ಸಚಿವರು) :

ಅ) 2001-02 ಮತ್ತು 2002-03ನೇ ಸಾಲಿನ ವಿವರಗಳು ಅನುಬಂಧದಲ್ಲಿದೆ. (2000-2001ನೇ ಸಾಲಿನ ಮಾಹಿತಿ ಲಭ್ಯವಿಲ್ಲ)

ಆ) ಇಲ್ಲ

ಇ) ಉದ್ಭವಿಸುವುದಿಲ್ಲ

ಅನುಬಂಧ

ಜಿಲ್ಲಾವಾರು ವೈದ್ಯಕೀಯ ಶಿಕ್ಷಣಕ್ಕೆ ಪ್ರವೇಶ ಪಡೆದ ಅಭ್ಯರ್ಥಿಗಳ ಅಂಕಿ ಅಂಶ

2002-2003

ಸಂ	ಜಿಲ್ಲೆ	2001-2002	2002-2003
1	2	3	4
1.	ಬಾಗಲಕೋಟೆ		17
2.	ಬೆಂಗಳೂರು ನಗರ	339	
3.	ಬೆಂಗಳೂರು ಗ್ರಾಮಾಂತರ		416
4.	ಬೆಳಗಾಂ	75	68
5.	ಬಳ್ಳಾರಿ	88	53
6.	ಬೀದರ್		33
7.	ಬಿಜಾಪುರ	100	43
8.	ಚಾಮರಾಜನಗರ		11
9.	ಚಿಕ್ಕಮಗಳೂರು		17
10.	ಚಿತ್ರದುರ್ಗ	50	31
11.	ದಾವಣಗೆರೆ	123	41
12.	ಧಾರವಾಡ	92	87
13.	ಗದಗ್		6
14.	ಗುಲ್ಬರ್ಗಾ	100	71
15.	ಹಾಸನ		24
16.	ಹಾವೇರಿ		11
17.	ಕಾರವಾರ		26
18.	ಕೋಲಾರ	75	72
19.	ಕೊಪ್ಪಳ		7
20.	ಮಡಿಕೇರಿ		4
21.	ಮಂಡ್ಯ	50	30
22.	ದಕ್ಷಿಣ ಕನ್ನಡ	106	106
23.	ಮೈಸೂರು	161	90
24.	ರಾಯಚೂರು		23
25.	ಶಿವಮೊಗ್ಗ		59
26.	ತುಮಕೂರು	64	78
27.	ಉಡುಪಿ		57